ಬಂದು ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು. ಒಂದು ಸೆಮಿಸ್ಟರ್‌ನಲ್ಲಿ ಕನಿಷ್ಠ 25ರಿಂದ 50 ಗಂಟೆಯವರೆಗೆ ಬೋಧಿಸಿದರೆ ಅವರನ್ನು 'ಪ್ರೊಫೆಸರ್ ಆಫ್ ಪ್ರಾಕ್ಟೀಸ್' ಎಂದು ಕರೆಯುತ್ತಾರೆ. ಈ ರೀತಿ, ಸುಮಾರು 40 ಜನರನ್ನು ನಾವು ನೇಮಕ ಮಾಡಿಕೊಂಡಿದ್ದೇವೆ. ಇವರೆಲ್ಲಿ ಅನೇಕರು ಇನ್ಫೋಸಿಸ್, ಎಲ್ ಅಂಡ್ ಟಿ, ಇನ್ನಿತರ ಕಂಪನಿಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ. ಈ ವರ್ಷ ಈ ಸಂಖ್ಯೆಯನ್ನು 100ಕ್ಕೆ ಏರಿಸುವ ಉದ್ದೇಶವಿದೆ' ಎಂದು ಸದಾಶಿವೇಗೌಡ ಹೇಳಿದರು.

'ಈ ರೀತಿ ಕಂಪನಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡಿದರೆ, ವಿದ್ಯಾರ್ಥಿಗಳಿಗೂ ಕಾರ್ಪೊರೇಟ್ ಜಗತ್ತಿನಲ್ಲಿ ಏನು ನಡೆಯುತ್ತಿದೆ, ನಮ್ಮಿಂದ ಏನು ಬಯಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಅದೇ ರೀತಿ, ಕಂಪನಿಗಳಲ್ಲಿಯೂ ಈಗಿನ ವಿದ್ಯಾರ್ಥಿಗಳು ಎಲ್ಲಿ ಹಿಂದುಳಿದಿದ್ದಾರೆ ಅಥವಾ ಯಾವ ವಿಷಯಗಳಲ್ಲಿ ಮುಂದುವರಿದಿದ್ದಾರೆ, ನಾವು ಯಾವೆಲ್ಲ ಅಂಶಗಳಲ್ಲಿ ಅಪ್‌ಡೇಟ್ ಆಗಬೇಕು ಎಂಬುದು ತಿಳಿಯುತ್ತದೆ. ಎಲ್ಲ ಕಾಲೇಜುಗಳಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಜಾಗತಿಕ ಸ್ಪರ್ಧೆಗೆ ತಕ್ಕಂತೆ ಗುಣಮಟ್ಟದ ಎಂಜಿನಿಯರ್‌ಗಳನ್ನು ನಾವು ತಯಾರು ಮಾಡಬಹುದಾಗಿದೆ' ಎಂದರು.

**ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು:** 'ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳನ್ನು ನಮ್ಮ ಕಾಲೇಜಿನಿಂದಲೇ ಗುರುತಿಸಿರುತ್ತೇವೆ. ಅವರಿಗಾಗಿಯೇ 1 ಕೋಟಿಯಷ್ಟು ಹಣವನ್ನು ಮೀಸಲಿಟ್ಟಿದ್ದೇವೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಈ ಹಣದಲ್ಲಿ ನೀಡುತ್ತೇವೆ' ಎಂದೂ ಅವರು ಹೇಳಿದರು.

'ಭಾರತ ಸರ್ಕಾರದ ವಿದ್ಯಾಲಕ್ಷ್ಮಿ ಎನ್ನುವ ಒಂದು ಸ್ಕೀಂ ಇದೆ. ಯಾವುದೇ ಶ್ಯೂರಿಟಿ ಇಲ್ಲದೆಯೇ 7.5 ಲಕ್ಷದವರೆಗೆ ಬ್ಯಾಂಕ್ ಸಾಲ ಈ ಸ್ಕೀಂ ಅಡಿ ವಿದ್ಯಾರ್ಥಿಗಳಿಗೆ ಸಿಗುತ್ತದೆ. ಕರ್ನಾಟಕ ಸರ್ಕಾರದಲ್ಲಿಯೂ ಇಂತಹ ಹಲವು ಕಾರ್ಯಕ್ರಮಗಳು ಇವೆ. ಕಾರ್ಪೊರೇಟ್ ಕಂಪನಿಗಳು ಕೂಡ ಅವರ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸುತ್ತಿವೆ. ನಮ್ಮ ಕಾಲೇಜಿನಲ್ಲಿ ಸುಮಾರು 40ರಿಂದ 50 ವಿದ್ಯಾರ್ಥಿಗಳಿಗೆ ಕಂಪನಿಗಳು ಸಿಎಸ್‌ಆರ್ ಅಡಿ ಹಣಕಾಸಿನ ನೆರವು ನೀಡುತ್ತಿದ್ದಾರೆ. ಆದರೆ, ಇಂತಹ ಯೋಜನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಇರುವುದಿಲ್ಲ. ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಕೆಲಸ ಮಾಡಬೇಕು' ಎಂದು ಸಲಹೆ ನೀಡುತ್ತಾರೆ ಸದಾಶಿವೇಗೌಡ.



ಸೈಬರ್ ಸೆಕ್ಯುರಿಟಿ, ಕ್ಲೌಡ್ ಕಂಪ್ಯೂಟಿಂಗ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್, ಕೋಡಿಂಗ್, ಡಿಜಿಟಲ್ ಮಾರ್ಕೆಟಿಂಗ್, ಡಿಸೈನ್ ಹಾಗೂ ಬಯೋಟೆಕ್ನಾಲಜಿಯಂತಹ ಕೌಶಲ ಕೇಂದ್ರಿತ ಕೋರ್ಸ್‌ಗಳು ಬೇಡಿಕೆ ಪಡೆದುಕೊಳ್ಳುತ್ತಿವೆ. ಇವು ಸದ್ಯಕ್ಕೆ ಉದ್ಯೋಗ ಲಭ್ಯತೆ ಅಥವಾ ಎಂಪ್ಲಾಯಬಿಲಿಟಿಯ ಕೋರ್ಸ್‌ಗಳು ಎಂಬ ಕಾರಣಕ್ಕೂ ಇವುಗಳಿಗೆ ಮಹತ್ವ ಹೆಚ್ಚುತ್ತಿದೆ. ಆದರೆ, ಇದೇ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯವರೆಗೆ ಓದುವುದರಲ್ಲಿ ಯುವ ಸಮೂಹ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ.

## ದೀರ್ಘಾವಧಿ ಪ್ರಗತಿ ಸಾಧ್ಯವೇ?

ಈ ಎಲ್ಲ ಬೆಳವಣಿಗೆಗಳ ನಡುವೆಯೂ, ಎಲ್ಲರೂ ಕೇಳಿಕೊಳ್ಳಬೇಕಾದ ಪ್ರಶ್ನೆ, 'ಶಿಕ್ಷಣವಿಲ್ಲದೆ ದೀರ್ಘಾವಧಿಯ ಪ್ರಗತಿ ಸಾಧ್ಯವೇ?' ಎಂಬುದು. ಗಿಗ್ ಎಕಾನಮಿ ಅಡಿಯ ಉದ್ಯೋಗಗಳು ಅಥವಾ ಇತರೆ ಕೆಲಸಗಳು ತಾತ್ಕಾಲಿಕ ಪರಿಹಾರ ನೀಡಬಹುದು. ಆದರೆ, ನೈಜವಾದ ಸ್ಥಿರತೆ, ಮಾನಸಿಕ ತೃಪ್ತಿ, ಸಮಾಜದಲ್ಲಿ ಗೌರವ ನೀಡುವ ಶಕ್ತಿ ಇರುವುದು ಶಿಕ್ಷಣಕ್ಕೆ ಮಾತ್ರ. ಹೀಗಾಗಿ, ಸಮಾಜ, ಸರ್ಕಾರ ಹಾಗೂ ಶೈಕ್ಷಣಿಕ ಸಂಸ್ಥೆಗಳು ಈ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಬೇಕಿದೆ. ■